# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 51 ಫ್ರಾ.ಸಾ. : 36**

| | | |
|---|---|---|
| ಸಾಕ್ಷಿಯ ಹೆಸರು | : | ಮರ್ವಿನ್ ಡಯಾಗೋ ಫರ್ನಾಂಡಿಸ್ |
| ತಂದೆಯ ಹೆಸರು | : | ಡಯಾಗೋ ಫರ್ನಾಂಡಿಸ್ |
| ವಯಸ್ಸು | : | 54 ವರ್ಷ |
| ಕೆಲಸ | : | ಜನರಲ್ ಮ್ಯಾನೇಜರ್, ಶಾಂತೇಶ್ ಮೋಟಾರ್ಸ್ ಪ್ರೈ.ಲಿ., ಬೆಳಗಾವಿ |
| ವಾಸ | : | ಧಾರವಾಡ |

**ದಿನಾಂಕಃ 21-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ನಾನು ಕಳೆದ 15 ವರ್ಷಗಳಿಂದ ಬೆಳಗಾವಿಯ ಶಾಂತೇಶ್ ಮೋಟಾರ್ಸ್ ಪ್ರೈ.ಲಿ.,ಯಲ್ಲಿ ಮ್ಯಾನೇಜರ್ ಹಾಗೂ ಜನರಲ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಮ್ಮ ಕಂಪನಿಯು ಹೊಸ ಮಾರುತಿ ಕಾರುಗಳನ್ನು ಮಾರಾಟ ಮಾಡುವ ಕೆಲಸ ಮಾಡುತ್ತದೆ. ಅದರ ಜೊತೆಗೆ ಟ್ರೂ ವ್ಯಾಲ್ಯು ಹೆಸರಿನಡಿಯಲ್ಲಿ ಹಳೆಯ ಕಾರುಗಳನ್ನೂ ಸಹ ಗ್ರಾಹಕರಿಂದ ಕೊಂಡುಕೊಳ್ಳುವ ಹಾಗೂ ಮಾರಾಟ ಮಾಡುವ ಮತ್ತು ಕಾರುಗಳ ವಿನಿಮಯ ವ್ಯವಹಾರವನ್ನೂ ಸಹ ಮಾಡುತ್ತಾ ಬಂದಿರುತ್ತದೆ.

2. ದಿ.12-10-2018 ರಂದು ಕಾರವಾರ ಪೊಲೀಸರು ನಮ್ಮ ಕಂಪನಿಗೆ ಬಂದು ಪತ್ರವನ್ನು ನೀಡಿ, ನೊಂದಣಿ ನಂ. ಎಂ.ಹೆಚ್-04/ಬಿಕೆ-0726 ಜೆನ್ ಕಾರನ್ನು ಮಾರಾಟ ಮಾಡಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಿರುತ್ತಾರೆ. ಅದರಂತೆ, ನಾನು ನಮ್ಮ ಕಂಪನಿಯಲ್ಲಿದ್ದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ಕಾರು ಶ್ರೀ ಮಾಧವ ಗುಜ್ಜರ್ ರವರ ಹೆಸರಿನಿಂದ ಎಕ್ಸ್‌ಚೇಂಜ್ ಆಫರ್ ಮೂಲಕ ದಿ.12-10-2018 ರಂದು ಶ್ರೀ ಶೇಖ್

ಮುಸ್ತಾಕ್ ಅಹಮದ್ ರವರಿಗೆ ಸಾಃ ದಾಂಡೇಲಿ ಇವರಿಗೆ ರೂ.45,090/- ಗೆ ಮಾರಾಟ ಮಾಡಿರುವುದು ಕಂಡುಬಂದಿರುತ್ತದೆ. ಅದರಂತೆ ನಾನು ಸದರಿ ಕಾರಿಗೆ ಸಂಬಂಧಿಸಿದ ದಾಖಲೆಗಳನ್ನು ಅದೇ ದಿನ ಕವಚ ಪತ್ರದೊಂದಿಗೆ ಪೊಲೀಸರಿಗೆ ನೀಡಿರುತ್ತೇನೆ. ಸದರಿ ಜೆನ್ ಕಾರನ್ನು ಮಾರಾಟ ಮಾಡಲು ಬಂದಿದ್ದ ಮಾಧವ ಗುಜ್ಜರ್ ರವರಿಂದ ಆರ್.ಸಿ. ಮತ್ತು ಇನ್ಸೂರೆನ್ಸ್, Form-29 and Form-30 ಇವುಗಳನ್ನು ಪಡೆದುಕೊಂಡಿರುತ್ತೇನೆ ಹಾಗೂ ಸದರಿ ಕಾರನ್ನು 2 ನೇ ಆರೋಪಿಯು ಖರೀದಿಸಿದ ಬಗ್ಗೆ ರಶೀದಿಯನ್ನು ನೀಡಿರುತ್ತೇನೆ.

3. ಸಾಕ್ಷಿಯು ಪೊಲೀಸರಿಂದ ತಮ್ಮ ಕಂಪನಿಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-94 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-94(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಕವಚ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-95 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-95(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಇನ್ವಾಯಿಸ್ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-96 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-96(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಲೆಡ್ಜರ್ ಅಕೌಂಟ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-97 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-97(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಎಕ್ಸಚೇಂಜ್ ಡಿಕ್ಲರೇಷನ್ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-98 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-98(ಎ) ಎಂದು ಗುರುತಿಸಲಾಯಿತು. ಸದರಿ ವಾಹನಕ್ಕೆ ಸಂಬಂಧಿಸಿದ ಆರ್.ಸಿ. ಕಾರ್ಡನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-37 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಸಾಕ್ಷಿಯು ಇನ್ಸೂರೆನ್ಸ್ ಪ್ರತಿ ಹಾಗೂ ಅದರೊಂದಿಗಿರುವ ಎಮಿಷನ್ ಟೆಸ್ಟ್ ಪ್ರತಿ, ಎರಡು ರಶೀದಿಗಳು, Pre owned car booking/ commitment checklist, Form-29 and Form-30 ಈ ಎಲ್ಲಾ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-38 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು Pre owned car booking/commitment checklist, ರಲ್ಲಿರುವ ತನ್ನ ಸಹಿಯನ್ನು ಹಾಗೂ ಕಂಪನಿಯಿಂದ ಕಾರು ಖರೀದಿಸಿದ 2 ನೇ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-38(ಎ), (ಬಿ) ಎಂದು ಗುರುತಿಸಲಾಯಿತು. ಅದೇ ರೀತಿ,

Form–29 and Form–30 ಗಳಲ್ಲಿರುವ ಕಾರು ಮಾರಾಟ ಮಾಡಿದ ಮಾಧವ ಗುಜ್ಜರ್ ರವರ ಒಟ್ಟು 5 ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–38(ಸಿ), (ಡಿ), (ಈ), (ಎಫ್) ಮತ್ತು (ಜಿ) ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದ ಮುಂದಿರುವ ಎಂ.ಓ.11 ಕಾರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಸಾಕ್ಷಿಯು ಈಗ ನ್ಯಾಯಾಲಯದ ಮಾಡಿರುವ 2 ನೇ ಆರೋಪಿಯನ್ನೂ ಸಹ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

4. ನಾನು ನಮ್ಮ ಕಂಪನಿಗೆ 2010 ರಲ್ಲಿ ಮ್ಯಾನೇಜರ್ ಆಗಿ ನೇಮಕವಾಗಿದ್ದು, ನಂತರ 2019 ರಲ್ಲಿ ಜನರಲ್ ಮ್ಯಾನೇಜರ್ ಆಗಿ, ಭಡ್ತಿ ಹೊಂದಿ ಕಾರ್ಯ ನಿರ್ವಹಿಸುತ್ತಿದ್ದೇನೆ. 2004 ನೇ ಇಸವಿಯಿಂದ ಟ್ರೂ ವ್ಯಾಲ್ಯು ಹೆಸರಿನಡಿಯಲ್ಲಿ ನಮ್ಮ ಕಂಪನಿಯು ಹಳೆಯ ಕಾರುಗಳನ್ನು ಖರೀದಿ ಮಾಡುವ ಹಾಗೂ ಮಾರಾಟ ಮಾಡುವ ಕೆಲಸ ಮಾಡುತ್ತಾ ಬಂದಿರುತ್ತದೆ. ನಮ್ಮ ಕಂಪನಿಯಲ್ಲಿ ಹೊಸ ಕಾರುಗಳನ್ನು ಮಾರಾಟ ಮಾಡುವ ಹಾಗೂ ಹಳೆಯ ಕಾರುಗಳನ್ನು ಖರೀದಿಸಿ ಪುನಃ ಮಾರಾಟ ಮಾಡುವ ಪ್ರತ್ಯೇಕ ವಿಭಾಗ ಇರುತ್ತದೆ ಎಂದರೆ ಸರಿ. ಪ್ರತಿ ವಿಭಾಗಕ್ಕೆ ಪ್ರತ್ಯೇಕ ಮ್ಯಾನೇಜರುಗಳು ಇರುತ್ತಾರೆ ಎಂದರೆ ಸರಿ. 2018 ರಲ್ಲಿ ನಾನು ಟ್ರೂ ವ್ಯಾಲ್ಯು ಅಂದರೆ, ಹಳೆಯ ಕಾರುಗಳ ವ್ಯವಹಾರದ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. 2018 ರಲ್ಲಿ ಶಾಂತೇಶ್ ಮೋಟಾರ್ಸ್ ಹಾಗೂ ಟ್ರೂ ವ್ಯಾಲ್ಯು ಎರಡೂ ಸಹ ಬೆಳಗಾವಿಯ ವೈಭವ ನಗರದಲ್ಲಿ ಕೆಲಸ ಮಾಡುತ್ತಿರುತ್ತದೆ. ಸದರಿ ನಮ್ಮ ಕಂಪನಿಯ ಶೋ ರೂಮಿನಲ್ಲಿ ಹಳೆಯ ಕಾರುಗಳನ್ನು ಕೆಳಗಡೆ ಹಾಗೂ ಹೊಸ ಕಾರುಗಳನ್ನು ಮೇಲ್ಗಡೆ ಇಡುತ್ತೇವೆ. ಸದರಿ ಎರಡೂ ವಿಭಾಗಳಿಗೆ ಪ್ರತ್ಯೇಕ ಕಚೇರಿಗಳು ಆಯಾ ಫ್ಲೋರುಗಳಲ್ಲಿರುತ್ತವೆ. ನಮ್ಮ ಶೋ ರೂಮಿನಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳು ವ್ಯವಸ್ಥೆ ಇರುತ್ತದೆ. ನಮ್ಮ ಶೋ ರೂಮಿಗೆ ಯಾರೇ ಬಂದರೂ, ಸಿ.ಸಿ.ಟಿ.ವಿ ಯಲ್ಲಿ ದಾಖಲಾಗುತ್ತದೆ ಎಂದರೆ ಸರಿ. ನಮ್ಮ ಕಂಪನಿಯ ಸಿ.ಸಿ.ಟಿ.ವಿ ಫೂಟೇಜ್ ಎಷ್ಟು ದಿನಗಳ ವರೆಗೆ ಸಂಗ್ರಹವಾಗುತ್ತದೆ ಎಂದು ನನಗೆ ಗೊತ್ತಿಲ್ಲ.

5. ಈ ಪ್ರಕರಣದಲ್ಲಿ ಜಪ್ತಾಗಿರುವ ಎಂ.ಓ-11 ಕಾರಿನ ವಿಷಯಕ್ಕೆ ಸಂಬಂಧಿಸಿದಂತೆ ಕಾರವಾರ ಠಾಣೆಯ ಇಬ್ಬರು ಪೊಲೀಸರು ನಮ್ಮ ಶೋ ರೂಮಿಗೆ ದಿ.27-10-2018 ರಂದು ಭೇಟಿ ನೀಡಿರುತ್ತಾರೆ, ಆದರೆ ಅವರ ಪದನಾಮಗಳು ಹೇಳಲು ಬರುವುದಿಲ್ಲ, ಆದರೆ ಅವರು ಸಮವಸ್ತ್ರದಲ್ಲಿದ್ದರು ಹಾಗೂ ತಾವು ಕಾರವಾರದ ಪೊಲೀಸರೆಂದು ತಿಳಿಸಿರುತ್ತಾರೆ. ಆದರೆ ಅವರ ಹೆಸರನ್ನು ನಾನು ಕೇಳಿರುವುದಿಲ್ಲ. ನಮ್ಮ ಕಂಪನಿಗೆ ಬಂದಂತಹ ಪೊಲೀಸರಿಗೆ ಸದರಿ ಕಾರಿನ Form-29 and Form-30 ನ್ನು ಕೊಟ್ಟಿರುವುದಿಲ್ಲ. ಏಕೆಂದರೆ ಅವುಗಳನ್ನು ಈಗಾಗಲೇ ಕಾರು ಖರೀದಿಸಿದ ಗ್ರಾಹಕನಾದ 2 ನೇ ಆರೋಪಿಗೆ ನೀಡಿರುತ್ತೇವೆ. ಎಕ್ಸಚೇಂಜ್ ಆಫರ್ ರಡಿಯಲ್ಲಿ ಹೊಸ ಕಾರನ್ನು ಖರೀದಿಸಿದ ಮಾಧವ ಗುಜ್ಜರ್ ರವರ ಇನ್ವಾಯಿಸ್ ಪ್ರತಿ ನಮ್ಮ ಬಳಿ ಇರುವುದಿಲ್ಲ, ಅದು ಹೊಸ ಕಾರು ಮಾರಾಟ ವಿಭಾಗದಲ್ಲಿರುತ್ತದೆ. ಸದರಿ ದಾಖಲೆಯು ಬೇರೊಬ್ಬ ಮ್ಯಾನೇಜರ್ ರವರ ಸ್ವಾಧೀನದಲ್ಲಿರುತ್ತದೆ. ಹೊಸ ಕಾರು ಖರೀದಿಗೆ ಬಂದಂತಹ ಗ್ರಾಹಕರು ಹೊಸ ಕಾರು ಮಾರಾಟ ವಿಭಾಗಕ್ಕೆ ಹೋಗಿ, ಅಲ್ಲಿಯೇ ವ್ಯವಹಾರವನ್ನು ಮಾಡುತ್ತಾರೆ ಎಂದರೆ ಸರಿ. ಒಂದು ವೇಳೆ ಗ್ರಾಹಕರು ತಮ್ಮ ಹಳೆಯ ಕಾರನ್ನು ಎಕ್ಸ್‌ಚೇಂಜ್ ಆಫರ್ ಅಡಿಯಲ್ಲಿ ಮಾರಾಟ ಮಾಡಿ, ಹೊಸ ಕಾರು ಖರೀದಿಸಲು ಬಯಸಿದ್ದಲ್ಲಿ ಹಳೆಯ ಕಾರಿನ ವಿಷಯಕ್ಕೆ ಸಂಬಂಧಿಸಿದ ವ್ಯವಹಾರವು ಟ್ರ್ಯೂ ವ್ಯಾಲ್ಯು ವಿಭಾಗ ಅಂದರೆ ಕೆಳಗಿನ ಫ್ಲೋರ್ ನಲ್ಲಿ ನಡೆಯುತ್ತದೆ. ಮಾಧವ ಗುಜ್ಜರ್ ರವರು ನಮ್ಮ ಟ್ರ್ಯೂ ವ್ಯಾಲ್ಯು ವಿಭಾಗಕ್ಕೆ ದಿ.05-10-2018 ರಂದು ಬಂದಿರುತ್ತಾರೆ ಹಾಗೂ ಅವರನ್ನು ಮೊದಲಿಗೆ ನಮ್ಮ ಸೇಲ್ಸ್ ಎಕ್ಸಿಕ್ಯೂಟಿವ್ ಹಾಗೂ ಕಾರು ಎಕ್ಸಪರ್ಟ್ ರವರು ಭೇಟಿ ಮಾಡಿ ಮಾತನಾಡಿಸುತ್ತಾರೆ. ಮಾಧವ ಗುಜ್ಜರ್ ರವರು ನಮ್ಮ ಶೋ ರೂಮಿಗೆ ಬಂದಾಗ ನಮ್ಮ ಸೇಲ್ಸ್ ಎಕ್ಸಿಕ್ಯೂಟಿವ್ ರವರಾದ ಪ್ರವೀಣ ಶೆಟ್ ಗೇರಿ ಹಾಗೂ ಕಾರು ಎಕ್ಸಪರ್ಟ್ ರವರಾದ ಸಮೀರ್ ಬದ್ನೀಕರ್ ರವರು ಭೇಟಿ ಮಾಡಿರುತ್ತಾರೆ. ಮಾಧವ ಗುಜ್ಜರ್ ರವರು ಎಂದಿಗೂ ನನ್ನನ್ನು ಭೇಟಿ ಮಾಡಿರುವುದಿಲ್ಲ.

6. ದಯಾನಂದ ಗುಜ್ಜರ್ ರವರು ಮಾಧವ ಗುಜ್ಜರ್ ರವರ ಮಗ. ಮಾಧವ ಗುಜ್ಜರ್ ರವರು ಹೊಸ ಕಾರನ್ನು ಖರೀದಿ ಮಾಡಿರುವುದಿಲ್ಲ, ಆದರೆ ಅವರ ಮಗ ದಯಾನಂದ ಗುಜ್ಜರ್ ರವರು ಖರೀದಿಸಿರುತ್ತಾರೆ. ಮಾಧವ ಗುಜ್ಜರ್ ರವರಿಂದ ಕಾರನ್ನು ಖರೀದಿಸುವ ಸಮಯದಲ್ಲಿ ಮಹಾರಾಷ್ಟ್ರ ರಾಜ್ಯದ ಆರ್.ಟಿ.ಓ. ಅಧಿಕಾರಿಗಳಿಂದ ಸದರಿ ವಾಹನಕ್ಕೆ ಸಂಬಂಧಿಸಿದ ಎನ್.ಓ.ಸಿ. ಯನ್ನು ಪಡೆದಿರುವುದಿಲ್ಲ. ಬೇರೆ ರಾಜ್ಯದ ವಾಹನಗಳನ್ನು ಖರೀದಿಸಬೇಕಾದಲ್ಲಿ, ಸದರಿ ರಾಜ್ಯದ

ಆರ್.ಟಿ.ಓ. ರವರಿಂದ ಎನ್.ಓ.ಸಿ. ಯನ್ನು ಪಡೆಯಬೇಕಾಗುತ್ತದೆ ಎಂದರೆ ಸರಿಯಲ್ಲ. ಬೇರೆ ರಾಜ್ಯದ ವಾಹನವನ್ನು ಕರ್ನಾಟಕದಲ್ಲಿ ನೊಂದಣಿ ಮಾಡಿಸಬೇಕಾದರೆ ಸಂಬಂಧಿಸಿದ ಆರ್.ಟಿ.ಓ. ರವರಿಂದ ಎನ್.ಓ.ಸಿ. ಪಡೆಯಬೇಕಾಗುತ್ತದೆ ಎಂದರೆ ಸರಿ. ಮಾಧವ ಗುಜ್ಜರ್ ರವರಿಂದ ಕಾರನ್ನು ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ ಬಗ್ಗೆ ದಾಖಲೆ ಇರುತ್ತದೆ, ಆದರೆ ಅದನ್ನು ನಾವು ಪೊಲೀಸರಿಗೆ ನೀಡಿರುವುದಿಲ್ಲ. ಮಾಧವ ಗುಜ್ಜರ್ ರವರಿಂದ ದಿ.05-10-2018 ರಂದು ಕಾರನ್ನು ಖರೀದಿಸಿರುತ್ತೇವೆ. ದಯಾನಂದ ಗುಜ್ಜರ್ ರವರು ಹೊಸ ಕಾರು ಖರೀದಿಸಿದ ಬಗ್ಗೆ ನಮ್ಮ ಹೊಸ ಕಾರಿನ ಶೋ ರೂಮಿನಿಂದ ಇನ್‌ವಾಯಿಸನ್ನು ಪಡೆದು ಪೊಲೀಸರಿಗೆ ನೀಡಿರುತ್ತೇವೆ. ನಿಪಿ-96, ಪಿ-97 ಮತ್ತು ಪಿ-98 ದಾಖಲೆಗಳನ್ನು ನಾನು ನಮ್ಮ ಶೋ ರೂಮಿನ ಹೊಸ ಕಾರು ಮಾರಾಟ ವಿಭಾಗದಲ್ಲಿ ಪಡೆದುಕೊಂಡು ಪೊಲೀಸರಿಗೆ ನೀಡಿರುತ್ತೇನೆ. ಪೊಲೀಸರು ನನ್ನ ಬಳಿ ಬಂದಾಗ ಜೆನ್ ಕಾರಿಗೆ ಸಂಬಂಧಿಸಿದ ದಾಖಲೆಗಳು ಇರುವುದಿಲ್ಲ. ಪೊಲೀಸರಿಗೆ ದಾಖಲೆಗಳನ್ನು ನೀಡುವಾಗ ಬುಕ್ಕಿಂಗ್ ಫಾರ್ಮ್ ನ್ನೂ ಸಹ ನೀಡಿರುತ್ತೇನೆ. ನಿಪಿ-38 ರಲ್ಲಿರುವ ಬುಕ್ಕಿಂಗ್ ಫಾರ್ಮನ್ನು ನಾನೇ ಪೊಲೀಸರಿಗೆ ನೀಡಿರುತ್ತೇನೆ. ನಿಪಿ-38 ಬುಕ್ಕಿಂಗ್ ಫಾರ್ಮ್ ನಲ್ಲಿರುವ ನಿಪಿ-38(ಬಿ)ಸಹಿ ಹಾಗೂ ನಿಪಿ-98 ರಲ್ಲಿರುವ ಗ್ರಾಹಕರ ಸಹಿ ಎರಡೂ ಒಂದೇ ಎಂದರೆ ಸರಿಯಲ್ಲ. ನಿಪಿ-96 ಇನ್ವಾಯಿಸ್ ಮತ್ತು ನಿಪಿ-98 ಡಿಕ್ಲರೇಷನ್ ರಲ್ಲಿರುವ ಗ್ರಾಹಕರ ಸಹಿಗಳು ಎರಡೂ ಒಂದೇ ಎಂದರೆ ಸರಿ, ಹಾಗೂ ಆ ಎರಡೂ ಸಹಿಗಳು ದಯಾನಂದ ಗುಜ್ಜರ್ ರವರು ಸಹಿಗಳಾಗಿವೆ. ಮಾಧವ ಗುಜ್ಜರ್ ರವರು ಸಹಿ ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲೆಯಲ್ಲಿ ಇರುವುದಿಲ್ಲ. ನಿಪಿ-94 ಹಾಗೂ ಪಿ-95 ದಾಖಲೆಗಳನ್ನು ಪೊಲೀಸರೇ ತಯಾರಿಸಿ ಕೊಟ್ಟಿರುತ್ತಾರೆ. ಯಾವುದೇ ವ್ಯಕ್ತಿ ಟ್ರೂ ವ್ಯಾಲ್ಯುನಲ್ಲಿ ಕಾರನ್ನು ಖರೀದಿ ಮಾಡಲು ಬಂದರೆ ನಮ್ಮ ಸೇಲ್ಸ್ ಎಕ್ಸಿಕ್ಯೂಟಿವ್ ರವರನ್ನು ಭೇಟಿ ಮಾಡುತ್ತಾರೆ ಮತ್ತು ಅವರೇ ವ್ಯವಹಾರವನ್ನೂ ಮಾಡುತ್ತಾರೆ. ಆದರೆ, ಹೆಚ್ಚಿನ ಮಾತುಕತೆಯ ಅವಶ್ಯವಿದ್ದಲ್ಲಿ ನನ್ನನ್ನೂ ಸಹ ಭೇಟಿ ಮಾಡುತ್ತಾರೆ. ಈ ಪ್ರಕರಣದಲ್ಲಿ ಜಪ್ತು ಮಾಡಿದ ಜೆನ್ ಕಾರಿನ ವಿಷಯಲ್ಲಿ ನಾವು ಯಾವುದೇ ರಿಯಾಯಿತಿ ನೀಡಿರುವುದಿಲ್ಲ. ಈ ಕಾರಿನ ಖರೀದಿದಾರ ನನ್ನೊಂದಿಗೆ ಮಾತನ್ನಾಡಿಲ್ಲದ ಕಾರಣ, ನಾನು ಆತನನ್ನು ಎಂದಿಗೂ ನೋಡಿಲ್ಲ ಎಂದರೆ ಸರಿಯಲ್ಲ. ಕಾರನ್ನು ಡೆಲಿವರಿ ನೀಡುವಾಗ, ಬುಕ್ಕಿಂಗ್ ಫಾರ್ಮ್ ಗೆ ಸಹಿ ಮಾಡಿದಾಗ ನಾನು 2 ನೇ ಆರೋಪಿಯನ್ನು ನೋಡಿರುತ್ತೇನೆ. ಇದೇ ಮೊದಲ ಬಾರಿಗೆ ನಾನು 2 ನೇ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

7. ಕಾರನ್ನು ಖರೀದಿ ಮಾಡಲು ಬಂದಂತಹ ವ್ಯಕ್ತಿಯ ಫೋಟೊ ಹಾಗೂ ಸಹಿಯನ್ನು ನಾವು ಪಡೆದುಕೊಳ್ಳುತ್ತೇವೆ. ಆ ರೀತಿ ಪಡೆದುಕೊಂಡ ಫೋಟೊವನ್ನು ನಾವು ಪೊಲೀಸರಿಗೆ ನೀಡಿರುವುದಿಲ್ಲ. ಕಾರವಾರದ ಪೊಲೀಸರು ನನ್ನನ್ನು ತನಿಖೆಗಾಗಿ ಕಾರವಾರಕ್ಕೆ ಕರೆಸಿಲ್ಲ. ಈ ಪ್ರಕರಣದ ತನಿಖಾಧಿಕಾರಿ ಎಂದಿಗೂ ನಮ್ಮ ಶೋ ರೂಮಿಗೆ ಬಂದು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಎಂ.ಓ–11 ಕಾರನ್ನು ನೋಡಿದರೆ, ಅದು ಅಪಘಾತಕ್ಕೊಳಗಾದ ಕಾರಿನಂತೆ ಕಾಣುತ್ತದೆ ಎಂದರೆ ಸರಿ. ಎಂ.ಓ–11 ಕಾರನ್ನು ನಮ್ಮ ಶೋ ರೂಮಿನಿಂದ ಖರೀದಿಸಿರುತ್ತಾರೆ ಎಂದು ತೋರಿಸಲು ಯಾವುದೇ ವಿಶೇಷವಾದ ಗುರುತು ಇಲ್ಲ ಎಂದರೆ ಸಾಕ್ಷಿಯು, ಕಾರಿನ ನೊಂದಣಿ ಸಂಖ್ಯೆ ಇರುತ್ತದೆ ಎಂದು ನುಡಿಯುತ್ತಾರೆ. ಕೇವಲ ನಂಬರು ಪ್ಲೇಟಿನ ಆಧಾರದ ಮೇಲೆ ಕಾರನ್ನು ಗುರುತಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ನಂಬರ್ ಪ್ಲೇಟನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. 2 ನೇ ಆರೋಪಿ ನಮ್ಮ ಟ್ರ್ಯೂ ವ್ಯಾಲ್ಯು ಶೋ ರೂಮಿಗೆ ಬಂದು ಜೆನ್ ಕಾರನ್ನು ಖರೀದಿಸಿರುತ್ತಾನೆ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನೀಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ವಿಚಾರಣೆಗೆ ಬಂದಾಗ, ನಿಪಿ–96, 97, 98 ದಾಖಲೆಗಳನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಧವ ಗುಜ್ಜರ್ ರವರಿಂದ ಕಾರನ್ನು ನಾವು ಖರೀದಿಸಿದ್ದರಿಂದ ಮಾರಾಟಗಾರರಿಗೆ ಸಹಿಯನ್ನು ನಾವೇ ಮಾಡಿಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ